ಹುಡ್ಕೋ ಸಂಸ್ಥೆಯ ನೆರವಿನಿಂದ 6000 ವಸತಿ ಗೃಹಗಳನ್ನು ಕಟ್ಟುವ ಬಗ್ಗೆ.

344 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ), ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಹುಡ್ಕೋ ಸಂಸ್ಥೆಯ ನೆರವಿನಿಂದ 6000 ವಸತಿ ಗೃಹಗಳನ್ನು ಕಟ್ಟುವ ಪ್ರಸ್ತಾವನೆಯನ್ನು ಕಳುಹಿಸಿದೆಯೆ?

ಆ) ಹಾಗಿದ್ದಲ್ಲಿ ಬೆಂಗಳೂರು ನಗರದಲ್ಲಿ ಕಟ್ಟಲ್ಪಡುವ ವಸತಿ ಗೃಹಗಳ ಸಂಖ್ಯೆಯ ಪ್ರಸ್ತಾವನೆ ಎಷ್ಟು?

ಇ) ಹುಡ್ಕೋ ಸಂಸ್ಥೆಯಿಂದ ಒಟ್ಟು ನಿರೀಕ್ಷಿತ ಹಣ.

ಈ) ಹುಡ್ಕೋ ಸಂಸ್ಥೆಯ ನೆರವನ್ನು ಮಂಜೂರು ಮಾಡಿದೆಯೇ?

ಶ್ರೀ ಕೆ.ಜೆ.ಜಾರ್ಜ್, (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ಅಸ್ತಿತ್ವಕ್ಕೆ ಬಂದಂದಿನಿಂದ ಇಲ್ಲಿಯವರೆವಿಗೂ ಹುಡ್ಕೋ ಸಂಸ್ಥೆಯ ನೆರವಿನಿಂದ 27 ಯೋಜನೆಗಳಲ್ಲಿ 6313 ಮನೆಗಳನ್ನು ನಿರ್ಮಿಸಲಾಗುತ್ತಿದೆ.

ಆ) 2548 ಮನೆಗಳನ್ನು ನಿರ್ಮಿಸಲಾಗುತ್ತಿದೆ.

ಇ) ರೂ 861.27 ಲಕ್ಷಗಳು

ಈ) ಹೌದು

ಶ್ರೀ ಎಂ. ಪೆರಿಕಲ್ ಮಲ್ಲಪ್ಪ : ಅಧ್ಯಕ್ಷರೆ ಬೆಂಗಳೂರು ಮಹಾನಗರದಲ್ಲಿ 45ಲಕ್ಷ ಜನಸಂಖ್ಯೆ ಇದೆ. ಈ 45 ಲಕ್ಷ ಜನಸಂಖ್ಯೆಯಲ್ಲಿ 8 ಲಕ್ಷ ಜನ 401 ಐಡೆಂಟಿಫೈ ಸ್ಲಮ್ಸ್‌ನಲ್ಲಿ ಬೆಂಗಳೂರು ಮಹಾನಗರದಲ್ಲಿ ವಾಸಿಸುತ್ತಿದ್ದಾರೆ. ಈ ಕೊಳಚೆ ಪ್ರದೇಶಗಳಲ್ಲಿ ಬಹಳಷ್ಟು ನಗರಸೌಲಭ್ಯಗಳು ಯಾವುದು ಇಲ್ಲ. ಅವರಿಗೆ ಮನೆಗಳು ಇಲ್ಲ. ಕುಡಿಯುವ ನೀರನ್ನು ಅವರಿಗೆ ಒದಗಿಸಿಲ್ಲ. ಮತ್ತೆ ರಸ್ತೆಗಳು ಚರಂಡಿಗಳು ಮುಂತಾದ ಯಾವ ತರಹದ ನಗರಸೌಲಭ್ಯಗಳು ಅವರಿಗೆ ಇಲ್ಲ. ಆದರೆ ಮಂತ್ರಿಗಳು ಹುಡ್ಕೋ ಸಂಸ್ಥೆಯ ನೆರವಿನಿಂದ 6,313 ಮನೆಗಳನ್ನು ನಿರ್ಮಿಸಲಾಗುತ್ತಿದೆಯೆಂದು ಹೇಳಿದ್ದಾರೆ. ಬೆಂಗಳೂರು ನಗರದಲ್ಲಿ 2,548 ಮನೆಗಳನ್ನು ನಿರ್ಮಿಸಲಾಗುತ್ತದೆ ಎಂದು ಹೇಳಿದ್ದಾರೆ ಬೆಂಗಳೂರು ನಗರದಲ್ಲಿ ಈ 2,548 ಮನೆಗಳನ್ನು ಎಲ್ಲಿ ನಿರ್ಮಿಸುತ್ತಾರೆ ಮತ್ತು ನಮ್ಮ ಚಿಕ್ಕಪೇಟೆ ಕಾನ್ಸ್‌ಟಿಟ್ಯುಯೇನ್ಸಿಯಲ್ಲಿ ಎಷ್ಟು ಮನೆಗಳನ್ನು ನಿರ್ಮಿಸುತ್ತಾರೆ? ಇದಕ್ಕೆ ಯಾವುದಾದರೂ ನಿಯಮಗಳನ್ನು ಮಾಡಿದಿರಾ? ಈ ಮನೆಗಳನ್ನು ಹೌಸಿಂಗ್‌ಬೋರ್ಡ್‌ನವರು ಮಾಡುತ್ತಾರಾ ಅಥವಾ ಸ್ಲಮ್‌ಕ್ಲಿಯರೆನ್ಸ್ ಬೋರ್ಡ್‌ನವರು ಮಾಡುತ್ತಾರಾ ತಾವು ಯಾವರೀತಿ ಸ್ಲಮ್ಸ್‌ಅನ್ನು ಐಡೆಂಟಿಫೈ ಮಾಡಿ, ಯಾರು ಬೆನಿಫಿಷಿಯರೀಸ್ ಎಂದು ತಿಳಿದುಕೊಂಡು ಅವರಿಗೆ ಯಾವರೀತಿ ಮನೆಗಳನ್ನು ಕಟ್ಟಿಕೊಡುತ್ತೀರಿ ಎನ್ನುವುದನ್ನು ಮಾನ್ಯ ನಗರಾಭಿವೃದ್ಧಿ ಸಚಿವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಜೆ. ಜಾರ್ಜ್: ಬೆಂಗಳೂರು ನಗರದಲ್ಲಿ ಸಾಕಷ್ಟು ಕೊಳಚೆ ಪ್ರದೇಶಗಳಿವೆ. ಇದರಲ್ಲಿ ಕೆಲವು ಕರ್ನಾಟಕ ಸ್ಲಂ ಕ್ಲಿಯರೆನ್ಸ್ ಬೋರ್ಡ್‌ನ ಅಧೀನದಲ್ಲಿ ಬರುತ್ತವೆ ಇನ್ನು ಕೆಲವು ಬಿ.ಡಿ.ಎ. ಅಧೀನದಲ್ಲಿ ಬರುತ್ತವೆ. ಮತ್ತೆ ಕೆಲವು ಕಾರ್ಪೋರೇಷನ್‌ನ ಅಧೀನದಲ್ಲಿ ಬರುತ್ತವೆ. ಈಗಾಗಲೇ ಸಾಕಷ್ಟು ಮೂಲಭೂತವಾದ ಸೌಕರ್ಯಗಳನ್ನು ಅವರಿಗೆ ಮಾಡಿಕೊಟ್ಟಿದ್ದೇವೆ. ಆದರೆ ಈಗಿನ ಕೆಲವು ತೊಂದರೆಗಳು ಎಂದರೆ ಅಕ್ವಿಷನ್ ನೋಟಿಫಿಕೇಷನ್ ಮಾಡಿದಮೇಲೆ ಖಾಸಗೀಯವರಿಂದ ನಮ್ಮ ಸ್ವಾಧೀನಕ್ಕೆ ಜಮೀನು ಬರತಕ್ಕದ್ದು ಬಹಳ ತಡವಾಗುತ್ತದೆ. ಈ ವಿಚಾರದಲ್ಲಿ ಕರ್ನಾಟಕ ಸ್ಲಂ

ಕ್ಲಿಯರೆನ್ಸ್ ಬೋರ್ಡ್ ಆಕ್ಟ್‌ಗೆ ತಿದ್ದುಪಡಿಯನ್ನು ತರುವುದಕ್ಕೆ ನಾವು ಈಗಾಗಲೇ ಪರಿಶೀಲಿಸುತ್ತಿದ್ದೇವೆ. ಆದಷ್ಟು ಬೇಗ ತಿದ್ದುಪಡಿಯನ್ನು ತರುತ್ತೇವೆ.

ಇನ್ನೊಂದು ವಿಚಾರ ಎಂದರೆ ಕರ್ನಾಟಕ ಹೌಸಿಂಗ್ ಬೋರ್ಡ್‌ನಿಂದ ಸುಮಾರು 60 ಸಾವಿರ ಮನೆಗಳನ್ನು ಇಡೀ ಕರ್ನಾಟಕ ರಾಜ್ಯದಲ್ಲಿರತಕ್ಕ ಸ್ಲಂ ವಾಸಿಗಳಿಗೆ ಮತ್ತು ವೀಕರ್ ಸೆಕ್ಷನ್‌ಗೆ ಕಟ್ಟಲಿಕ್ಕೆ ಇನ್ನೊಂದು ಯೋಜನೆ ನಮ್ಮ ಕ್ಯಾಬಿನೆಟ್ ಮುಂದೆ ಬರುತ್ತಿದೆ. ಅದರಲ್ಲಿ ಸುಮಾರು 30 ಸಾವಿರ ಮನೆಗಳನ್ನು ಬೆಂಗಳೂರು ನಗರದಲ್ಲಿ ಕಟ್ಟತಕ್ಕ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಕಾರ್ಪೊರೇಷನ್ ಲ್ಯಾಂಡ್ ಯಾವುದು ಇದೆ ಬಿ.ಡಿ.ಎ. ಲ್ಯಾಂಡ್ ಯಾವುದು ಇದೆ ಸರ್ಕಾರಿ ಜಮೀನು ಎಲ್ಲೆಲ್ಲಿದೆ ಅಲ್ಲೆಲ್ಲಾ ಆದಷ್ಟು ಜಾಗ್ರತೆ ಈ ಕಾರ್ಯವನ್ನು ತೆಗೆದುಕೊಳ್ಳುವ ಬಗ್ಗೆ ಕ್ಯಾಬಿನೆಟ್ ಮುಂದೆ ಬರುತ್ತಿದೆ. ಅದು ಬಂದಕೂಡಲೇ 30 ಸಾವಿರ ಮನೆಗಳನ್ನು ಬೆಂಗಳೂರು ನಗರದಲ್ಲಿ ಕಟ್ಟುವ ಕೆಲಸವನ್ನು ಕೈಗೊಳ್ಳುತ್ತೇವೆ.

ಶ್ರೀ ಪೆರಿಕಲ್ ಎಂ ಮಲ್ಲಪ್ಪ: ಮಾನ್ಯ ಸಚಿವರು ಹೇಳಿದಂತೆ ಬೆಂಗಳೂರು ಮಹಾ ನಗರದಲ್ಲಿ ಕೆಲವು ಸ್ಲಂಗಳು ಬಿ.ಡಿ.ಎ. ಗೆ ಸೇರುತ್ತವೆ. ಮತ್ತೆ ಕೆಲವು ಕಾರ್ಪೊರೇಷನ್‌ಗೆ ಸೇರುತ್ತವೆ. ಕಾರ್ಪೊರೇಷನ್‌ನವರು ಏನಾದರೂ ಟೈಟಲ್ ಡೀಡ್ ಕೊಡದಿದ್ದರೆ ಪಟ್ಟಾವನ್ನು ಕೊಡದಿದ್ದರೆ ಮನೆಗಳನ್ನು ಕಟ್ಟುವುದಕ್ಕೆ ಬಹಳ ಕಷ್ಟವಾಗುತ್ತದೆ. ಹೌಸಿಂಗ್ ಬೋರ್ಡ್ ಆಗಲಿ ಸ್ಲಂ ಬೋರ್ಡ್ ಆಗಲಿ ಪಟ್ಟಾವನ್ನು ಕೊಡದಿದ್ದರೆ ಕೊಳಚೆ ಪ್ರದೇಶದ ಜನರು ಮನೆಗಳನ್ನು ಕಟ್ಟುವುದು ಕಷ್ಟವಾಗುತ್ತದೆ. ಆದುದರಿಂದ ಮಾನ್ಯ ಸಚಿವರು ಸರ್ಕಾರದಿಂದ ಒಂದು ನಿರ್ದೇಶನವನ್ನು ನೀಡಿ ಈ ಕೊಳಚೆ ನಿವಾಸಿಗಳಿಗೆ ಆದಷ್ಟು ಬೇಗ ಪಟ್ಟಾವನ್ನು ಕೊಡುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರ ಎಂದರೆ ಕೆಲವು ತಿಂಗಳ ಹಿಂದೆ ಅಂದರೆ ಇತ್ತೀಚೆಗೆ ನೆದರ್‌ಲ್ಯಾಂಡಿನಿಂದ ಹೆಬಟ್ಯಾಟ್ ಎಂಬ ಒಂದು ಕಮಿಟಿಯು ಬಂದಿತ್ತು. ನೆದರ್‌ಲ್ಯಾಂಡ್‌ನವರು ಡೆಲಿಗೇಷನ್ ಬಂದು ನಾವು ಈ ಕೊಳಚೆ ಪ್ರದೇಶದ ಜನರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡುತ್ತವೆ, ಧನ ಸಹಾಯ ಮಾಡುತ್ತೇವೆಂದು ಮುಂದೆ ಬಂದಿದ್ದರು. ಈ ಸಮಿತಿಯವರಿಂದ ಏನಾದರೂ ಸಹಾಯ ಧನ ಬಂದಿದೆಯೆ? ಸರ್ಕಾರದವರು ಅವರನ್ನು ಮತ್ತೆ ಏನಾದರೂ ಕಂಟ್ಯಾಕ್ಟ್ ಮಾಡಿ ವ್ಯವಹಾರವನ್ನು ಮಾಡಿದ್ದಾರೆಯೇ ಎಂಬುದನ್ನು ಕೇಳಬಯಸುತ್ತೇನೆ. ಏಕೆಂದರೆ ಅವಿರಿಂದ ಕೋಟ್ಯಾಂತರ ರೂಪಾಯಿ ಹಣ ಸಿಕ್ಕತಕ್ಕ ಅವಕಾಶ ನಮಗಿದೆ.

ಶ್ರೀ ಕೆ.ಜೆ. ಜಾರ್ಜ್ : ಈಗಾಗಲೇ ಕರ್ಪೊರೇಷನ್ ಪ್ರದೇಶದಲ್ಲಿರತಕ್ಕ ಸ್ಲಂನ ಜನರಿಗೆ ಹಕ್ಕುಪತ್ರವನ್ನು ಕೊಡಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಆದರೆ ಕೆಲವರು ಸಣ್ಣ ಸಣ್ಣ ಜಾಗಗಳಲ್ಲಿ ಅಂದರೆ ಕೆಲವರು 8-10 ಅಡಿ ಅಳತೆಯಲ್ಲಿ ಕೆಲವರು 10-15 ಅಡಿ ಅಳತೆಯಲ್ಲಿ ಮತ್ತೆ ಕೆಲವರು 10-20 ಅಡಿ ಅಳತೆಯ ಜಾಗದಲ್ಲಿರುತ್ತಾರೆ. ಈಗಾಗಲೇ ಲೇಔಟ್ ಮಾಡುವುದಕ್ಕೆ ಹೌಸಿಂಗ್ ಬೋರ್ಡ್‌ನವರಿಗೆ ಹೇಳಿದ್ದೇವೆ. ಲೇಔಟ್ ಪ್ರಕಾರ 30 ಸಾವಿರ ಮನೆಗಳನ್ನು ಬೆಂಗಳೂರು ನಗರದಲ್ಲಿ ಕಟ್ಟುತ್ತೇವೆ. ವಿಶ್ವಬ್ಯಾಂಕ್‌ನಿಂದ ಮತ್ತು ಹೊರ ದೇಶಗಳಿಂದ ಹಣವನ್ನು ತೆಗೆದುಕೊಳ್ಳುವುದಕ್ಕೆ ಎಲ್ಲ ಪತ್ರ ವ್ಯವಹಾರಗಳನ್ನೂ ನಾವು ನಡೆಸುತ್ತಿದ್ದೇವೆ. ಆದಷ್ಟು ಜಾಗ್ರತೆ ಪ್ರಾಜೆಕ್ಷನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್. ವಿಶ್ವನಾಥಯ್ಯ : ಮಾನ್ಯ. ಅಧ್ಯಕ್ಷರೆ ಮಾನ್ಯ ಸಚಿವರು ಹುಡ್ಕೊ ಸಂಸ್ಥೆಯ ನೆರವಿನಿಂದ ಕರ್ನಾಟಕ ಗೃಹ ನಿರ್ಮಾಣ ಮಂಡಲಿಯ ಮುಖಾಂತರ 60 ಸಾವಿರ ಮನೆಗಳನ್ನು ಕೊಳಚೆ ಪ್ರದೇಶದ ನಿವಾಸಿಗಳಿಗೆ ನಿರ್ಮಾಣ ಮಾಡುತ್ತೇವೆಂದು ಹೇಳಿದರು. ನಾನಾದರೂ ಕೇಳುತ್ತೇನೆ. ಇದು ಕೇವಲ ಬೆಂಗಳೂರು ನಗರಕ್ಕೆ ಮಾತ್ರ

ಸೀಮಿತವಾಗಿದೆಯೆ? ಅಥವಾ ಚಿತ್ರದುರ್ಗ ನಗರದಲ್ಲಿರತಕ್ಕ ಕೊಳಚೆ ಪ್ರದೇಶದ ಜನರಿಗೂ ವಸತಿಗೃಹಗಳನ್ನು ನಿರ್ಮಾಣ ಮಾಡತಕ್ಕ ಯೋಜನೆ ಏನಾದರೂ ಸರ್ಕಾರಕ್ಕೆ ಇದೆಯೆ?

ಶ್ರೀ ಕೆ.ಜೆ.ಜಾರ್ಜ್ : ಸಾವಿರ ಮನೆಗಳನ್ನು ಬೆಂಗಳೂರು ನಗರದಲ್ಲಿ ಮಾತ್ರ ಕಟ್ಟತಕ್ಕ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಇನ್ನು 30 ಸಾವಿರ ಮನೆಗಳನ್ನು ಬೆಂಗಳೂರು ನಗರದಿಂದ ಹೊರಗಡೆ ಕಟ್ಟುವುದಕ್ಕೆ ನಾವು ಪರಿಶೀಲಿಸುತ್ತಿದ್ದೇವೆ. ಸರ್ಕಾರದ ಜಾಗ ಎಲ್ಲೆಲ್ಲಿ ಇದೆಯೋ ಅಲ್ಲೆಲ್ಲಾ ಆದಷ್ಟು ಜಾಗ್ರತೆ ಮನೆಗಳನ್ನು ಕಟ್ಟುವುದಕ್ಕೆ ವಿಪ್ಪಾಡು ಮಾಡುತ್ತಿದ್ದೇವೆ. ಈಗ ಕ್ಯಾಬಿನೆಟ್ ಮುಂದಿದೆ ಕ್ಯಾಬಿನೆಟ್ ಆದಕೂಡಲೇ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

ಸುಬ್ರಹ್ಮಣ್ಯ ದೇವಾಲಯದ ಆಡಳಿತ ಮಂಡಲಿಯ ಸಮಿತಿ ರಚನೆ

531 - ಶ್ರೀ ಕೆ ಕುಶಾಲ (ಸುಳ್ಯ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸುಳ್ಯ ತಾಲ್ಲೂಕಿನ ಶ್ರೀ ಕುಕ್ಕೆ ಸುಬ್ರಮಣ್ಯಸ್ವಾಮಿ ದೇವಾಲಯದ ಆಡಳಿತದ ಮಂಡಲಿಯ ಸಮಿತಿ ಅವಧಿಯು ಯಾವ ವರ್ಷಕ್ಕೆ ಮುಗಿಯುವುದು;

2) ಸದರಿ ದೇವಾಲಯದ ಹೊಸ ಆಡಳಿತ ಮಂಡಲಿ ಸಮಿತಿಯನ್ನು ಇನ್ನೂ ರಚಿಸದೇ ಇರಲು ಕಾರಣವೇನು

3) ಸದರಿ ದೇವಾಲಯದ ಆಡಳಿತ ಮಂಡಲಿ ಸಮಿತಿಯನ್ನು ಶೀಘ್ರವಾಗಿ ರಚಿಸಲಾಗುವುದೇ?

4) ಹಾಗಿದ್ದರೆ ಸದರಿ ದೇವಾಲಯದ ಆಡಳಿತ ಮಂಡಲಿ ಸಮಿತಿಯನ್ನು ಸದ್ಯಕ್ಕೆ ರಚಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು) :

1) 3.1.1990ಕ್ಕೆ ಮುಗಿದಿದೆ.

2) ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದೆ.

3) ನ್ಯಾಯಾಲಯದ ತೀರ್ಪು ಬಂದ ನಂತರ ಕ್ರಮ ತೆಗೆದುಕೊಳ್ಳಲಾಗುವುದು.

4) ನ್ಯಾಯಾಲಯದಿಂದ ಬಂದಿರುವ ತಡೆಯಾಜ್ಞೆಯನ್ನು ತೆರವು ಮಾಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ತಡೆಯಾಜ್ಞೆ ತೆರವು ಆದ ಕೂಡಲೇ ಆಡಳಿತ ಸಮಿತಿಯನ್ನು ರಚಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ. ಕುಶಾಲ: ಮಾನ್ಯ ಅಧ್ಯಕ್ಷರೆ ಸುಳ್ಯ ತಾಲ್ಲೂಕಿನ ಶ್ರೀ ಸುಬ್ರಮಣ್ಯ ಸ್ವಾಮಿ ದೇವಾಲಯದ ಆಡಳಿತ ಮಂಡಳಿ ರಚಿಸಲು ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದೆ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಯಾವ ರೀತಿಯ ತಡೆಯಾಜ್ಞೆ ಇದೆ? ಉಚ್ಚನ್ಯಾಯಾಲಯದ ತೀರ್ಪು ಯಾವ ಹಂತದಲ್ಲಿದೆ ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಧರ್ಮದರ್ಶಿಗಳ ನಾಮಿನೇಷನ್ ಮಾಡುವುದಕ್ಕೆ ಡಿ.ಸಿ.ಯವರು ಅರ್ಜಿಗಳನ್ನು ಕರೆದರು. ಅದರ ವಿರುದ್ಧವಾಗಿ ಅಲ್ಲಿರತಕ್ಕ ರೈ ಎನ್ನುವವರು ಹೈಕೋರ್ಟಿನಿಂದ ಸ್ಟೇ ತಂದಿದ್ದಾರೆ. ಆ ಸ್ಟೇ ವೆಕೇಟ್ ಆಗುವವರೆಗೆ ಜಿಲ್ಲಾಧಿಕಾರಿಯವರು ಯಾರನ್ನೂ ನಾಮಿನೇಷನ್ ಮಾಡುವುದಕ್ಕಾಗುವುದಿಲ್ಲ. ಸ್ಟೇ ವೆಕೇಟ್ ಆದಕೂಡಲೇ ನಾಮಿನೇಟ್ ಮಾಡುತ್ತಾರೆ.